O.S. ನಂಬರಃ 47/2017

ಪಿ. ಡಬ್ಲ್ಯೂಃ 1

ದಿಃ 13-02-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ

ಮೂಲದಾವಾ ನಂ. 45/2017 ರಲ್ಲಿ ನಾನು ಪಾಟಿ ಸವಾಲಿನಲ್ಲಿ ತಿಳಿಸಿದ ಸಂಗತಿ ಸರಿ ಇದೆಯಾ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆ ನೋಡಿ ಮೂಲದಾವೆ ನಂ. 45/2017 ರಲ್ಲಿ ಸಾಕ್ಷಿ ಪ್ರಮಾಣ ಪತ್ರ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಮೂಲದಾವೆ ನಂ. 89/2008 ರಲ್ಲಿ ನಾನು ವಕೀಲರ ಮುಖಾಂತರ ವಕಾಲತ್ ಸಲ್ಲಿಸಿದ್ದೆ ಎಂದರೆ ಸಾಕ್ಷಿ ವಕಾಲತ್ ಫಾರಂನ್ನು ನೋಡಿ ನಾವು ಈ ಪ್ರಕರಣದ ವಕೀಲರನ್ನು ಹೊರತುಪಡಿಸಿ ಬೇರೆ ಯಾರನ್ನೂ ನೇಮಿಸಿಕೊಂಡಿಲ್ಲ ಎಂದು ಹೇಳುತ್ತಾರೆ. ದಿಃ 20-11-2008 ರಂದು ಮೂಲದಾವೆ ನಂ. 89/2008 ರಲ್ಲಿ ಹಾಜರಾಗಿದ್ದೆ ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. 2008 ರಲ್ಲಿ ವಕೀಲರ ಮೂಲಕ ಹಾಜರಾಗಿದ್ದರೂ ಸಹ ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

ದಾವೆಯಲ್ಲಿ ನಮ್ಮ ಪರವಾಗಿ ಏನು ಬರೆದಿದ್ದಾರೆಂದು ಓದಿಸಿ ತಿಳಿದುಕೊಂಡಿದ್ದೀರಾ ಎಂದರೆ ನನ್ನ ತಾಯಿ ಹಾಗೂ ಚಿಕ್ಕಮ್ಮನ ಆಸ್ತಿ ನಮ್ಮ ಹೆಸರಿಗೆ ಆಗಬೇಕೆಂದು ಬರೆಸಲಾಗಿದೆ ಎಂದು ಹೇಳುತ್ತಾರೆ. ವಾದಪತ್ರದಲ್ಲಿ ತಿಳಿಸಿದ ಸಂಗತಿಗಳನ್ನು ನಮಗೆ ಓದಿ ಹೇಳಿರಬಹುದು, ಆದರೆ ನನಗೆ ನೆನಪಿಲ್ಲ. ಪ್ರತಿವಾದಿಯರ ಮನೆ ನಮ್ಮ ಮನೆಯಿಂದ

ಅಂದಾಜು ಒಂದುವರೆ ಕಿ.ಮೀ. ದೂರದಲ್ಲಿದೆ. 2 ನೇ ವಾದಿಯ ಮನೆ ಬಳಿ ಗ್ರಾಮ ಚಾವಡಿ ಇದೆ ಎಂದರೆ ಸಾಕ್ಷಿ ಒಂದು ಕಿ.ಮೀ. ದೂರದಲ್ಲಿದೆ ಎಂದು ಹೇಳುತ್ತಾರೆ. 2 ನೇ ವಾದಿ ಮನೆಯಿಂದ ಗ್ರಾಮ ಚಾವಡಿ 100 ಮೀ. ಒಳಗಡೆಯೇ ಇದೆ ಎಂದರೆ ಅದನ್ನೆಲ್ಲಾ ಲೆಕ್ಕ ಹಾಕಲಿಲ್ಲ ಎಂದು ಹೇಳುತ್ತಾರೆ. ವಾರಸಾ ಮ್ಯುಟೇಷನ್ ಮಾಡಬೇಕಿದ್ದರೆ ಚಾವಡಿಯಲ್ಲಿ ಅರ್ಜಿ ನೀಡಬೇಕಾಗುತ್ತದೆ ಎಂದರೆ ನಮ್ಮ ಪರವಾಗಿ ನಾವು ನೀಡಿಲ್ಲ ಎಂದು ಹೇಳುತ್ತಾರೆ. ಕೆಲಸದ ಅವಧಿಯಲ್ಲಿ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರು ಹಾಗೂ ಉಗ್ರಾಣಿಗಳು ಕಚೇರಿಯಲ್ಲಿಯೇ ಇರುತ್ತಾರೆಂದರೆ ಸರಿ. ಸದರಿ ಕಚೇರಿ ರಸ್ತೆಗೆ ತಾಗಿಕೊಂಡಿದೆ ಎಂದರೆ ಸರಿ.

ಕುಟುಂಬದ ಆಸ್ತಿ ವಾರಸಾವನ್ನು ನಾವೇ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ, ವಾರಸಾ ಮಾಡುತ್ತೇವೆ ಎಂದು ಪ್ರತಿವಾದಿಯರು ನಮ್ಮ ಸಹಿ ಪಡೆದಿದ್ದಾರೆಂದು ಹೇಳುತ್ತಾರೆ. ಸದರಿ ವಾರಸಾ ಅರ್ಜಿಗೆ 1 ನೇ ಪ್ರತಿವಾದಿ ಸಹಿ ಇಲ್ಲ ಎಂದರೆ ಗೊತ್ತಿಲ್ಲ. ಈಗ ನೋಡುತ್ತಿರುವ ವಂಶಾವಳಿ ದಾಖಲೆಗೆ ನಾವೇ ಮಾಹಿತಿ ನೀಡಿದ್ದೇವೆ ಎಂದರೆ ಸಾಕ್ಷಿ, ಆಸ್ತಿ ನಮ್ಮ ಹೆಸರಿನಲ್ಲಾಗಲೀ ಎಂದು ಸಹಿ ಮಾಡಿದ್ದೇವೆ, ಅವರ ಹೆಸರಿನಲ್ಲಿ ಹೇಗಾಗುತ್ತದೆ ಎಂದು ಉತ್ತರಿಸುತ್ತಾರೆ. ವಾರಸಾ ದಾಖಲೆಯನ್ನು ನಾವೇ ಮಾಡಿಕೊಂಡಿದ್ದೇವೆ ಎಂದರೆ ಸಹಿ ಮಾತ್ರ ಮಾಡಿದ್ದೇವೆ, ಅರ್ಜಿಯನ್ನು 1 ನೇ ಪ್ರತಿವಾದಿ ಗ್ರಾಮ ಚಾವಡಿಯಲ್ಲಿ ನೀಡಿದ್ದಾನೆ ಎಂದು ಹೇಳುತ್ತಾರೆ. ವಾರಸಾ ಸಮಯದಲ್ಲಿ ಭಾವಚಿತ್ರ,ಆಧಾರಕಾರ್ಡ ಹಾಗೂ ಸಹಿ ನೀಡಿದ್ದೇನೆ. ಮರಣ ದಾಖಲೆಗಳನ್ನು ನೀಡಿ ವಂಶಾವಳಿಯನ್ನು ನಾವೇ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 2 ನೇ ವಾದಿ ಬೆಳಂಬಾರ ಗ್ರಾಮ ಚಾವಡಿಗೆ

ಹೋಗಿ ವಂಶಾವಳಿ ಮಾಡಿಸಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಯ ಕುರಿತು ವಾರಸಾವನ್ನು 3 ನೇ ವ್ಯಕ್ತಿ ಮಾಡಲು ಅವಕಾಶವಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಸಂಬಂಧಿಸಿದ ಆಸ್ತಿ ವರ್ಗಾವಣೆ ಮಾಡಿಕೊಂಡಾಗಲೇ ವಾರಸಾ ಯಾವ ರೀತಿ ಮಾಡಿಕೊಳ್ಳಬೇಕೆಂದು ಮಾಹಿತಿ ಇತ್ತು ಎಂದರೆ ಸರಿಯಲ್ಲ.

2010-11 ರಲ್ಲಿಯೇ ನನ್ನ ತಂದೆ ಆಸ್ತಿಯ ಕುರಿತು ವಾರಸಾ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಂದೆ ಜೀವಂತ ಇದ್ದಾಗಲೇ ವ್ಯವಸ್ಥೆ ಮಾಡಿಟ್ಟಿದ್ದರು ಎಂದು ಹೇಳುತ್ತಾರೆ. ಹಣ ಪಡೆದು ವಕೀಲರ ಕಚೇರಿಗೆ ಹೋಗಿ ದಾಖಲೆ ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾವು ಹಣ ಪಡೆದು ದಾಖಲೆ ಮಾಡಿಕೊಟ್ಟಿದ್ದರ ಮೇಲೆ ಸ್ಟಾಂಪ್ ಶುಲ್ಕ ನೀಡಿ, ಖರೀದಿಪತ್ರಕ್ಕೂ ಸಹ ಸ್ಟಾಂಪ್ ಶುಲ್ಕ ನೀಡಿ ಪ್ರತಿವಾದಿ ಜಮೀನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಆಸ್ತಿ ಖರೀದಿಸಿದ ನಂತರ ದಾವಾ ಆಸ್ತಿ ಕಬ್ಜಾ ವಹಿವಾಟಿಯಲ್ಲಿದ್ದಾರೆ ಎಂದರೆ ಸರಿಯಲ್ಲ. ಹಣ ಪಡೆದು ದಾಖಲೆ ಬರೆದುಕೊಟ್ಟು ಕಬ್ಜಾ ವಹಿಸಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ದುಡ್ಡು ಕೊಡಲಿಲ್ಲವೆಂದು ಈಗ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

ಎಸ್.ಎಚ್. ನಾಯಕ ರವರ ಕಚೇರಿಗೆ ಹೋಗಿ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ 1 ನೇ ಪ್ರತಿವಾದಿ ಕರೆದುಕೊಂಡು ಹೋಗಿ ಸಹಿ ಮಾಡಿಸಿದ್ದಾನೆ, ಅದು ಯಾವ ಕಚೇರಿ ಎಂದು ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸಹಿ ಮಾಡುವ ಪೂರ್ವದಲ್ಲಿ ವಕೀಲರಿಗೆ ವಿಚಾರಿಸಿದ್ದೇನೆ, ಆಗ ವಾರಸಾ ಸಲುವಾಗಿ ದಾಖಲೆ ಇದೆ ಎಂದು ಹೇಳುತ್ತಾರೆ.

ಸಹಿ ಮಾಡುವಾಗ ನಾವು ಮೂರು ಜನ ಹಾಗೂ 1 ನೇ ಪ್ರತಿವಾದಿ ಇದ್ದು, ಯಾರ ಮನೆಯಲ್ಲಿ ಸಹಿ ಮಾಡಿದ್ದೇನೆ ಎಂದು ಅವರ ಬಗ್ಗೆ ಗೊತ್ತಿಲ್ಲ. ದಾಖಲೆಗೆ ಸಹಿ ಮಾಡುವಾಗ ಇದ್ದ ವಕೀಲರನ್ನು ನ್ಯಾಯಾಲಯದಲ್ಲಿ ನಾನು ನೋಡಿಲ್ಲ. ವಕೀಲರ ಬಳಿ ಇರುವ ನೋಂದಣಿ ಬುಕ್ ಗೂ ಸಹ ಸಹಿ ಮಾಡಿದ್ದೇನೆ ಎಂದರೆ ತಾಯಿಯ ನಂತರ ವಾರಸಾ ಮಾಡಿಕೊಳ್ಳಬೇಕೆಂದು ಸಹಿ ಮಾಡಿದ್ದೆ ಎಂದು ಹೇಳುತ್ತಾರೆ. ದಾಖಲೆಗೆ ವಕೀಲರು ಸೀಲ್ ಹಾಕಿರುವುದು ನೋಡಿಲ್ಲ. ಹಣ ಮುಟ್ಟಿದ ಬಗ್ಗೆ ರಶೀದಿಗೂ ಸಹ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

(1 ನೇ ಪ್ರತಿವಾದಿ ಪರ ಮಾಡಿದ ಪಾಟಿ ಸವಾಲನ್ನೇ 2 ನೇ ಪ್ರತಿವಾದಿ ಪರ ಅಳವಡಿಸಿಕೊಳ್ಳಲು ಅವರ ಪರ ವಕೀಲರು ವಿನಂತಿಸಿದ್ದು, ಅನುಮತಿಸಲಾಯಿತು.)

(3 ನೇ ಪ್ರತಿವಾದಿ ವಾರಸುದಾರರು ಗೈರು ಹಾಜರಿದ್ದು, ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.)

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.